## ಆಮೇಲೆ ಮಾಡಿ

ಅಂದು ಬಾಸ್ ಶೀನಿಯ ಮೇಲೆ ಸಿಟ್ಟಾಗಿದ್ದರು. ಮನೆಯಿಂದ ಕೆಲಸ ನಿರ್ವಹಿಸುತ್ತಿದ್ದ ಶೀನಿಗೆ ಬಾಸ್ ಫೋನ್ ಮಾಡಿದಾಗ ಫೋನನ್ನು ತೆಗೆದುಕೊಂಡ ಅವನ ಹೆಂಡತಿ, 'ಸಾರ್, ಅವರು ಬಟ್ಟೆ ತೊಳೆಯುತ್ತಿದ್ದಾರೆ. ಅರ್ಧ ಗಂಟೆ ಬಿಟ್ಟು ಫೋನ್ ಮಾಡಿ' ಎಂದಿದ್ದಳು. ಇದರಿಂದ ಸಿಟ್ಟಾದ ಬಾಸ್ ಅರ್ಧ ಗಂಟೆ ಬಿಟ್ಟು ಮತ್ತೆ ಫೋನ್ ಮಾಡಿದರು. ಈ ಬಾರಿ ಫೋನ್ ರಿಸೀವ್ ಮಾಡಿದ ಶೀನಿಗೆ, 'ಏನ್ರೀ? ವರ್ಕ್ ಫ್ರಂ ಹೋಮ್ ಮಾಡಿ ಅಂದ್ರೆ ವರ್ಕ್ ಫಾರ್ ಹೋಮ್ ಮಾಡ್ತಿದ್ದೀರಾ? ಆಗಲೇ ಫೋನ್ ಮಾಡಿದ್ದೆ, ಮತ್ತೆ ನನಗೆ ಫೋನ್ ಮಾಡಬೇಕು ತಾನೇ?' ಎಂದು ಗುಡುಗಿದರು. ಶೀನಿ, 'ಸಾರ್ ನಾನು ವಾಪಸ್ ಫೋನ್ ಮಾಡಿದ್ದೆ. ನಿಮ್ಮ ಹೆಂಡತಿ ರಿಸೀವ್ ಮಾಡಿ ಅವರು ಪಾತ್ರೆ ತೊಳೀತಿದ್ದಾರೆ. ಆಮೇಲೆ ಮಾಡಿ ಅಂತ ಹೇಳಿದ್ರು ಸಾರ್' ಎಂದ.

**ಎಂ.ಕೆ. ಮಂಜುನಾಥ್**



ಕಲೆ: ಗಣೇಶ ಆಚಾರ್ಯ



## ಅಗ್ಗದ ಕಾರು

'100 ರೂಪಾಯಿಗೆ ವಿದೇಶಿ ಕಾರು ಮಾರಾಟಕ್ಕಿದೆ' ಎಂಬ ಜಾಹೀರಾತನ್ನು ಓದಿದವರು, ಇದರಲ್ಲೇನೋ ಮೋಸವಿದೆಯೆಂದು ಖರೀದಿಸಲು ಮುಂದಾಗಲಿಲ್ಲ. ಆದರೆ, ಕುತೂಹಲಗೊಂಡ ವೃದ್ಧನೊಬ್ಬ ವಿದೇಶಿ ಕಾರನ್ನು ನೋಡಲು ಹೋದ. ಅದು ಕೇವಲ 10 ಸಾವಿರ ಕಿ.ಮೀ. ಓಡಿರುವ, ಸುಸ್ಥಿತಿಯಲ್ಲಿರುವ ಹೊಸ ಮಾದರಿಯ ವಾಹನವಾಗಿತ್ತು. 100 ರೂಪಾಯಿ ಕೊಟ್ಟು ಕಾರು ಖರೀದಿಸಿದ. ಕಾರಿನ ಒಡತಿ ಕಾರಿನ ಕೀಲಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ವೃದ್ಧನಿಗೆ ಹಸ್ತಾಂತರಿಸಿದಳು. ಬಳಿಕ ವೃದ್ಧ, 'ತಾವೇಕೆ ಇದನ್ನು ಇಷ್ಟೊಂದು ಅಗ್ಗದ ಬೆಲೆಗೆ ಮಾರಿದಿರಿ ಎಂದು ಕೇಳಬಹುದೆ? ಇದರ ರಹಸ್ಯವನ್ನು ನೀವು ಹೇಳದಿದ್ದರೆ ನಾನು ಕುತೂಹಲದೊಂದಿಗೇ ಸಾಯಬೇಕಾಗುತ್ತದೆ' ಎಂದು ಆಕೆಯನ್ನು ಕೇಳಿದ. ಆಗ ಆಕೆ ಹೇಳಿದರು, 'ಇತ್ತೀಚೆಗೆ ನನ್ನ ಪತಿ ನಿಧನರಾದರು. ಅವರು ತಮ್ಮ ವಿಲ್‌ನಲ್ಲಿ ಬರೆದ ಪ್ರಕಾರ ಈ ಕಾರನ್ನು ಮಾರಿ ಬಂದ ಹಣ ಅವರ ಬಿನ್ನಾಣಗಿತ್ತಿ ಸೆಕ್ರೆಟರಿಗೆ ಸಲ್ಲಬೇಕಾಗಿತ್ತು, ಅದಕ್ಕೆ!'

**ರಮಣ್ ಶೆಟ್ಟಿ ರೆಂಜಾಳ್**